

بسم اللہِ الرّحمٰن الرّحیم

# ಖಿಲಾಫತ್‌ನೊಂದಿಗೆ ಪರಿಪೂರ್ಣವಾದ ನಿಷ್ಠೆ ಮತ್ತು ಅನುಸರಣೆ ಅನಿವಾರ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ **ಫ್ರಾಂಕ್‌ಫಾರ್ಟ್**‌ನಿಂದ **29–05–2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿರುವರು: ಅಲ್ಲಾಹನು ಇಚ್ಛಿಸುವ ತನಕ ನಿಮ್ಮಲ್ಲಿ ನುಬುವ್ವತ್ ಇರುವುದು. ಅನಂತರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದ ಖಿಲಾಫತ್) ಸ್ಥಾಪಿತವಾಗುವುದು. ಅದು ಪ್ರವಾದಿಯ ಮಾರ್ಗದಲ್ಲಿ ಚಲಿಸುವ ಖಿಲಾಫತ್ ಆಗಿರುವುದು. ಅದಕ್ಕೆ ಸ್ವಂತ ಹಿತಾಸಕ್ತಿಗಳಿರಲಾರದು. ಅದು ಪ್ರವಾದಿಯ ಕೆಲಸವನ್ನು ಮುಂದುವರಿಸುವುದು. ಆದರೆ ಒಂದು ಕಾಲಾವಧಿ ನಂತರ ಈ ರಾಶಿದ ಖಿಲಾಫತ್ (ನೇರಮಾರ್ಗದ ಖಿಲಾಫತ್) ಕೊನೆಗೊಳ್ಳುವುದು. ಈ ಅನುಗ್ರಹವನ್ನು ನಿಮ್ಮಿಂದ ಕಿತ್ತು ಕೊಳ್ಳಲಾಗುವುದು. ಅನಂತರ ದೊರೆತನ ನಿಮ್ಮಲ್ಲಿ ಸ್ಥಾಪಿತವಾಗುವುದು. ಅದರಲ್ಲಿ ಜನರು ಕಷ್ಟಕ್ಕೆ ಗುರಿಯಾಗುವರು. ಅನಂತರ ಅದಕ್ಕಿಂತ ದೌರ್ಜನ್ಯಗಾರರಾದ ರಾಜರ ರಾಜ್ಯಭಾರ ನಡೆಯುವುದು. ಅನಂತರ ಅಲ್ಲಾಹನು ದಯೆದೋರುವನು. ಖಿಲಾಫತ್ ಅಲಾಮಿನ್‌ಹಾಜಿನ್ನುಬುವ್ವತ್ ಪುನಃ ಸ್ಥಾಪಿಸಲ್ಪಡುವುದು.

ಇಸ್ಲಾಮೀ ಚರಿತ್ರೆಯಲ್ಲಿ ವಿವಿಧ ಕಾಲಘಟ್ಟಗಳ ಮುಸ್ಲಿಮ್ ದೊರೆಗಳು ತಮ್ಮನ್ನು ಖಲೀಫರೆಂದು ಕರೆಯಿಸಿಕೊಳ್ಳುತ್ತಿದ್ದರು. ಅವರು ತಾವು ಖಲೀಫ ಸ್ಥಾನ ಪಡೆದವರೆಂದು ಹೇಳುತ್ತಿದ್ದರು. ಹೀಗಿದ್ದರೂ ಮುಸ್ಲಿಮರಲ್ಲಿ ಬಹುತೇಕ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಮೊದಲನೆಯ ನಾಲ್ಕು ಖಲೀಫರನ್ನು ಮಾತ್ರ ಖುಲಫಾಉರ್ರಾಶಿದೀನ್ (ನೇರ ಮಾರ್ಗಾವಲಂಬಿಗಳಾದ ಖಲೀಫರು) ಎಂದು ಗಣಿಸುತ್ತಾರೆ. ಅವರ ಕಾಲಘಟ್ಟವು ನೇರಮಾರ್ಗದ ಕಾಲಘಟ್ಟ ಎಂದು ಗಣಿಸಲ್ಪಡುತ್ತದೆ. ಆಗ ಕುಟುಂಬ ಸಂಬಂಧವಾದ ದೊರೆತನವಿರಲಿಲ್ಲ. ಸತ್ಯವಿಶ್ವಾಸಿಗಳ ಜಮಾಅತ್ ಮೂಲಕ ಅಲ್ಲಾಹನು ಖಿಲಾಫತಿನ ನಿಲುವಂಗಿ ಅವರಿಗೆ ತೊಡಿಸಿದನು. ಉಳಿದವರೆಲ್ಲರೂ ತಮ್ಮ ಕೌಟುಂಬಿಕ ದೊರೆತನ ಸ್ಥಾಪಿಸುವವರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಅಕ್ಷರಶಃ ಈಡೇರಿತು. ಹದೀಸಿನಲ್ಲಿ ಅವರು ನುಡಿದ ಕೊನೆಯ ಭಾಗ ಸಹ ಈಡೇರಬೇಕಾದುದೇ ಆಗಿತ್ತು. ಮುಸ್ಲಿಮರ ಬಿಗಡಾಯಿಸಿದ ಸ್ಥಿತಿಯನ್ನು ನೋಡಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಖಿಯಾಮತ್ ತನಕ ಬಾಕಿಯಾಗುವ ಶರೀಅತನ್ನು ನೀಡಿದ ಅಲ್ಲಾಹನು ದಯದೋರಿ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಲೋಕದಲ್ಲಿ ಪುನಃ ಸ್ಥಾಪಿಸಲಿಕ್ಕಿತ್ತು. ಅಹ್ಮದಿಯರಾದ ನಾವು ದೃಢವಾಗಿ ನಂಬುವುದೇನೆಂದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಮಾಡಿದ ವಾಗ್ದಾನ ಪ್ರಕಾರ ಮಸೀಹ್ ಮೌಊದ್ ಮತ್ತು ಮಹ್‌ದೀ ಮಅ್‌ಹೂದ್ ಮುಖಾಂತರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ತನ್ನು ಪುನಃ ಸ್ಥಾಪಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಉಮ್ಮತೀ ನಬಿ ಎಂಬ ಪದವಿ ನೀಡಿ ಖಾತಮುಲ್ ಖುಲಫಾ (ಖಲೀಫರಲ್ಲಿ ಶ್ರೇಷ್ಠ) ಎಂಬ ಸ್ಥಾನ ಸಹ ಅಲ್ಲಾಹನು ನೀಡಿರುವನು. ಈಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಿಲಾಫತ್ ಶೃಂಖಲೆ ಅವರ ಸತ್ಯಸಂಧನಾದ ಸೇವಕ ಮತ್ತು ಖಾತಮುಲ್ ಖುಲಫಾ ಆಗಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಮಾತ್ರ ಜಾರಿಯಾಗಬೇಕಾಗಿದೆ. ನಾವು ಅದೃಷ್ಟಶಾಲಿಗಳಾಗಿದ್ದೇವೆ. ಯಾಕೆಂದರೆ, ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶುಭವಾರ್ತೆಯ ಪಾಲು ಪಡೆಯುವವರಲ್ಲಿ ಸೇರಿದ್ದೇವೆ. ನಾವು ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಸ್ಥಾಪಿತವಾಗುವುದು ಎಂಬ ಭವಿಷ್ಯವಾಣಿಯ ಭಾಗವಾಗಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೂರತುಲ್ ಜುಮುಅದ **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** ಎಂಬ ವಚನದ ವ್ಯಾಖ್ಯಾನ ಮಾಡುತ್ತಾ ಅನಂತರ ಬರುವವರನ್ನು ಮೊದಲಿನ ಕಾಲದ ಜನರೊಂದಿಗೆ ಸೇರಿಸಿದ್ದರು. ಆ ಅನಂತರ ಬರಲಿದ್ದ ಜನರಲ್ಲಿ ನಾವು ಸೇರಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನಗೆ ಪ್ರಿಯರಾದ ಒಬ್ಬ ವ್ಯಕ್ತಿಯ ಬಗ್ಗೆ ಹೇಳಿದ್ದರು– ಆ ವ್ಯಕ್ತಿ ಸುರಯ್ಯಾ ನಕ್ಷತ್ರದ ತನಕ ಏರಿ ಹೋಗಿದ್ದ ಸತ್ಯವಿಶ್ವಾಸವನ್ನು ಭೂಮಿಗೆ ಮರಳಿ ತರುವರು ಎಂದು ಹೇಳಿದ್ದರು. ಅಂತಹ ಮಹಾನುಭಾವರನ್ನು ನಂಬುವವರಲ್ಲಿ ಅಲ್ಲಾಹನು ನಮ್ಮನ್ನು ಸೇರಿಸಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಮಹ್‌ದೀ ಮಸೀಹರಿಗೆ ತನ್ನ ಸಲಾಮ್ ತಲಪಿಸಬೇಕೆಂದು ಹೇಳಿದ್ದರೋ ಆ ಮಹ್‌ದೀ ಮಸೀಹರನ್ನು ನಂಬುವವರಲ್ಲಿ ಸೇರಲು ಅಲ್ಲಾಹನು ನಮಗೆ ಭಾಗ್ಯ ನೀಡಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆ ಪಾಲಿಸುವವರಲ್ಲಿ ನಾವು ಸೇರುವಂತೆ ಅಲ್ಲಾಹನು ಮಾಡಿದನು. ಅಹ್ಮದಿಯಾ ಜಮಾಅತ್ ಮೇಲೆ, ಎಂದರೆ ಅಹ್ಮದಿಯಾಗಿ ಬೈಅತ್ ಮಾಡಿದವರ ಮೇಲೆ ಅಲ್ಲಾಹನು ಹೀಗೆಯೂ ಅನುಗ್ರಹ ದಯಪಾಲಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ

ಮೂಲಕ ಅವರ ನಂತರ ಜಾರಿಗೊಂಡ ಖಿಲಾಫತ್ ಶೃಂಖಲೆಯನ್ನು ಬೈಅತ್ ಮಾಡುವವರಲ್ಲಿ ಅಲ್ಲಾಹನು ನಮ್ಮನ್ನು ಸೇರಿಸಿದನು.

ಅಲ್ಲಾಹನು ನೀಡಿದ ಈ ಎಲ್ಲ ಅನುಗ್ರಹಗಳು ಪ್ರತಿಯೊಬ್ಬ ಅಹ್ಮದಿಯನ್ನು ಒತ್ತಾಯ ಪಡಿಸುವುದೇನೆಂದರೆ, ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರಾಗಿ ನಮ್ಮ ಸ್ಥಿತಿಯಲ್ಲಿ ಬದಲಾವಣೆ ಉಂಟುಮಾಡಬೇಕಾಗಿದೆ. ಅಲ್ಲಾಹನು ಕಳುಹಿಸಿದ ಮಹಾನುಭಾವರನ್ನು ನಂಬುವವರಿಗೆ ಅದು ಕಡ್ಡಾಯವಾಗಿದೆ. ಆಗ ಮಾತ್ರ ನಾವು ಬೈಅತ್ ಶರತ್ತುಗಳನ್ನು ಈಡೇರಿಸುವವರಾಗುವೆವು. ಹಝ್ರತ್ ಮಹ್‌ದೀ ಮಸೀಹ್ ಅಲೈಹಿಸ್ಸಲಾಮ್, ಸುರಯ್ಯ ನಕ್ಷತ್ರಕ್ಕೆ ಏರಿ ಹೋದ ಸತ್ಯವಿಶ್ವಾಸವನ್ನು ಭೂಮಿಗೆ ಮರಳಿ ತಂದು ತನ್ನನ್ನು ನಂಬುವವರ ಹೃದಯಗಳಲ್ಲಿ ಅದನ್ನು ತುಂಬಿಸಬೇಕಾಗಿತ್ತು. ಪ್ರತಿಯೊಬ್ಬ ಅಹ್ಮದಿ ಈ ವಿಷಯದ ಬಗ್ಗೆ ಸಾಕ್ಷಿಯಾಗಿದ್ದಾರೆ– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಕೆಲಸ ಈಡೇರಿಸಿ ತೋರಿಸಿದ್ದಾರೆ ಎಂದು. ಆದರೆ ಸತ್ಯವಿಶ್ವಾಸವನ್ನು ಸ್ಥಾಪಿಸಿಡುವುದು ಕೇವಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲಕ್ಕೆ ಸೀಮಿತವಾದುದಾಗಿರಲಿಲ್ಲ. ಅಥವಾ ಕೆಲವು ದಶಕಗಳಿಗೆ ಸೀಮಿತವಾಗುವುದಾಗಿರಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಸ್ಥಾಪಿಸಲ್ಪಡುವ ಬಗ್ಗೆ ಶುಭವಾರ್ತೆ ನೀಡಿ ನಂತರ ಮೌನವನ್ನು ಅವಲಂಬಿಸಿದರು. ಇದರಿಂದ ತಿಳಿಯುವುದೇನೆಂದರೆ ಈ ಸತ್ಯವಿಶ್ವಾಸ ಭೂಮಿಯಲ್ಲಿ ತನ್ನ ಎಲ್ಲ ವೈಭವಗಳೊಂದಿಗೆ ಖಿಯಾಮತ್ ತನಕ ನೆಲೆ ನಿಲ್ಲಬೇಕಾದುದಾಗಿದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದವರಲ್ಲಿ ಸೇರಿರುವೆನು ಎಂದು ಗಣಿಸುವವನಿಗೆ ಕಡ್ಡಾಯವಾಗಿರುವುದೇನೆಂದರೆ ಅವನು ಈ ಸತ್ಯವಿಶ್ವಾಸವನ್ನು ತನ್ನ ಹೃದಯದಲ್ಲಿ ಸ್ಥಾಪಿಸಿ ಅದರಲ್ಲಿ ಯಾವಾಗಲೂ ಸ್ಥಿರತೆಯಿಂದಿರಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಕಡ್ಡಾಯ ಕರ್ತವ್ಯವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಡೆವಳಿಕೆಗಳನ್ನು ಅನುಸರಿಸುವ ಖಿಲಾಫತ್ ವ್ಯವಸ್ಥೆಯ ಜೊತೆ ಸೇರಿ ಈ ಸತ್ಯವಿಶ್ವಾಸವನ್ನು ಪ್ರಕಟಿಸುವವರಾಗಿ ಅದನ್ನು ಲೋಕದ ಮೂಲೆ ಮೂಲೆಗಳಲ್ಲಿ ಹರಡಬೇಕು. ಲೋಕದಲ್ಲಿ ಏಕದೇವ ವಿಶ್ವಾಸವನ್ನು ಸ್ಥಾಪಿಸಬೇಕು. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಮಾಅತಿಗೆ ತಾನು ಇಹಲೋಕದಿಂದ ಹೋಗಲಿರುವೆನು ಎಂಬ ದುಃಖಭರಿತ ವಾರ್ತೆಯನ್ನು ನೀಡುವುದರೊಂದಿಗೆ ಒಂದು ಶುಭವಾರ್ತೆ ಸಹ ನೀಡಿದ್ದರು. ಅವರು ಹೀಗೆ ಹೇಳಿದ್ದರು:

"ಅಲ್ಲಾಹನು ಪುರಾತನ ಕಾಲದಿಂದಲೂ ಎರಡು ವಿಧಗಳ ದಿವ್ಯಶಕ್ತಿಗಳನ್ನು ಪ್ರಕಟಿಸುತ್ತಾ ಬಂದಿದ್ದಾನೆ. ಮತ್ತು ಶತ್ರುಗಳ ಎರಡು ರೀತಿಯ ಸುಳ್ಳು ಸಂತೋಷಗಳನ್ನು ನಿಷ್ಫಲಗೊಳಿಸುತ್ತಾನೆ. ಈಗ ಅಲ್ಲಾಹನು ಪುರಾತನ ಕಾಲದಿಂದಲೂ ಜಾರಿಗೊಂಡ ತನ್ನ ನಡೆವಳಿಕೆಯನ್ನು ಬಿಟ್ಟುಬಿಡಲಾರನು. ನಿಮಗೆ ದ್ವಿತೀಯ ದಿವ್ಯಶಕ್ತಿಯನ್ನು ನೋಡಬೇಕಾದುದು ಆವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಏಕೆಂದರೆ ಅದು ಶಾಶ್ವತವಾಗಿದೆ. ಖಿಯಾಮತ್ ತನಕ ಅದರ ಶೃಂಖಲೆ ಮುರಿದು ಹೋಗಲಾರದು."

ಸತ್ಯವಿಶ್ವಾಸವನ್ನು ಭೂಮಿಯಲ್ಲಿ ಸ್ಥಾಪಿಸಿ ಇಡಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಈ ದ್ವಿತೀಯ ದಿವ್ಯಶಕ್ತಿಯನ್ನು ಜಾರಿಗೊಳಿಸಿದನು. ಈ ದ್ವಿತೀಯ ದಿವ್ಯಶಕ್ತಿ ಖಿಲಾಫತ್ ಎಂದು ನಾವೆಲ್ಲರೂ ಚೆನ್ನಾಗಿ ತಿಳಿದುಕೊಂಡಿದ್ದೇವೆ. ಧರ್ಮದ ಅಭಿವೃದ್ಧಿಗೆ ಖಿಲಾಫತ್ ವ್ಯವಸ್ಥೆಯೊಂದಿಗೆ ಪ್ರಮುಖ ಸಂಬಂಧವಿದೆ. ಇದು ಇಸ್ಲಾಮೀ ಶರೀಅತ್‌ನ ಒಂದು ಮುಖ್ಯ ಭಾಗವಾಗಿದೆ. ಧಾರ್ಮಿಕ ಅಭಿವೃದ್ಧಿ ಖಿಲಾಫತ್ ಮೂಲಕವಲ್ಲದೆ ಸಾಧ್ಯವೇ ಇಲ್ಲ. ಜಮಾಅತಿನ ಐಕ್ಯತೆ ಸಹ ಖಿಲಾಫತ್ ವ್ಯವಸ್ಥೆ ಇಲ್ಲದೆ ಸ್ಥಾಪಿತವಾಗಿರಲಾರದು. ಖಿಲಾಫತ್‌ನೊಂದಿಗೆ ಜೋಡಿಸಿಕೊಂಡಿರುವ ನಮ್ಮ ಪೈಕಿ ಪ್ರತಿಯೊಬ್ಬನಿಗೆ ಚೆನ್ನಾಗಿ ತಿಳಿದಿದೆ– ಜಮಾಅತ್‌ನಲ್ಲಿ ಖಿಲಾಫತ್ ವ್ಯವಸ್ಥೆ ಇರಬೇಕಾದುದು ಸತ್ಯವಿಶ್ವಾಸದ ಒಂದು ಭಾಗವಾಗಿದೆ ಎಂದು. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಹಿಂದಿನ ಕಾಲದವರ ಬಲಿದಾನಗಳ ಕಾರಣದಿಂದ ಅವರು ಸತ್ಯವಿಶ್ವಾಸದಲ್ಲಿ ಹೊಂದಿದ್ದ ದೃಢತೆ ಕಾರಣದಿಂದ ನಮ್ಮ ಪೈಕಿ ಇರುವ ಅನೇಕ ಯುವಕರು ಆ ಹಿರಿಯರ ಸಂತಾನಕ್ಕೆ ಸೇರಿದವರಾಗಿದ್ದಾರೆ. ಅವರು ಖಿಲಾಫತ್ ವ್ಯವಸ್ಥೆಯ ಅನುಗ್ರಹದಿಂದ ಅನುಗ್ರಹ ಗಳಿಸುತ್ತಾ ಇದ್ದಾರೆ. ಈ ನಿಟ್ಟಿನಲ್ಲಿ ಎಲ್ಲರಿಗಿಂತ ಹೆಚ್ಚು ಪ್ರಯತ್ನ ಮಾಡಿದವರು ಮತ್ತು ಬಲಿದಾನ ಅರ್ಪಿಸಿದವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ದ್ವಿತೀಯ ಖಲೀಫ) ಆಗಿದ್ದರು. ಅವರ ಮೇಲೆ ದೋಷಾರೋಪ ಮಾಡಿದವರು ದೊಡ್ಡ ದೊಡ್ಡ ಆರೋಪಗಳನ್ನು ಮಾಡಿದರು. ಆದರೆ ಅವರು ಹೃತ್ಪೂರ್ವಕವಾಗಿ ಬಯಸಿದುದು ಖಿಲಾಫತ್ ವ್ಯವಸ್ಥೆಯನ್ನು ರಕ್ಷಿಸಬೇಕೆಂದಾಗಿತ್ತು. ಅದರ ಒಂದು ಕಿರಣವನ್ನು ಅವರ ಶಬ್ದಗಳಲ್ಲಿಯೇ ನಾನು ನಿಮ್ಮ ಮುಂದೆ ಇರಿಸುತ್ತೇನೆ. ಇದು ಚರಿತ್ರೆಯ ಭಾಗವಾಗಿದೆ. ಕಲಹಗಳಿಂದ ರಕ್ಷಣೆ ಪಡೆಯಲು ನಾವು ಚರಿತ್ರೆಯನ್ನು ದೃಷ್ಟಿಸಬೇಕು. ಅದು ಸತ್ಯವಿಶ್ವಾಸವನ್ನು ಬಲಪಡಿಸುವ ಮಾರ್ಗವೂ ಆಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹೇಳುತ್ತಾರೆ:

"ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ (ಪ್ರಥಮ ಖಲೀಫ) ನಿಧನ ಹೊಂದಿದಾಗ ನಾನು ಮೌಲವಿ ಮುಹಮ್ಮದ್ ಅಲಿ ಸಾಹೇಬರನ್ನು ಕರೆದು ಅವರೊಡನೆ ಹೇಳಿದೆ: ಖಿಲಾಫತ್ ಬಗ್ಗೆ ಜಗಳ ಮಾಡಬೇಡಿರಿ. ಅಂದರೆ ಅದು ಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ಮಾಡಬೇಡಿರಿ. ಜಮಾಅತಿನ ಹಿತಾಸಕ್ತಿಗಳು ರಕ್ಷಿಸಲ್ಪಡುವ ಮತ್ತು ಇಸ್ಲಾಮಿಗೆ ಅಭಿವೃದ್ಧಿ ನೀಡುವಂತಹ ಓರ್ವ ಖಲೀಫ ಚುನಾಯಿಸಲ್ಪಡಲಿ ಎಂದು ಮಾತ್ರ ಯೋಚಿಸಿರಿ.

ನಾನು ನನ್ನ ಭಾವನೆಗಳನ್ನು ನಿಮಗೋಸ್ಕರ ಬಲಿದಾನ ಮಾಡುವೆನು. ಆದರೆ ಸಿದ್ಧಾಂತದ ಬಗ್ಗೆ ಪ್ರಶ್ನೆ ಬಂದರೆ ಸಿದ್ಧಾಂತಗಳಿಗೆ ನಿಷ್ಠನಾಗಲು ನಾನು ನಿರ್ಬಂಧಿತನಾಗುವೆನು. ಸಿದ್ಧಾಂತಗಳನ್ನು ತ್ಯಜಿಸುವುದು ಯಾವ ಕಾರಣಕ್ಕೂ ಅನುಮತಿಸಲ್ಪಡಲಾರದು. ನಾವು ಖಿಲಾಫತ್ ಒಂದು ಧಾರ್ಮಿಕ ಆವಶ್ಯಕತೆ ಎಂದು ನಂಬುತ್ತೇವೆ. ಅದನ್ನು ಸ್ಥಾಪಿಸಿಡುವುದು ಅನಿವಾರ್ಯ ಎಂದು ನಾವು ಹೇಳುತ್ತೇವೆ. ನೀವು ಸಹ ಖಿಲಾಫತನ್ನು ನಿಷಿದ್ಧ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಒಬ್ಬ ಖಲೀಫರೊಂದಿಗೆ ನೀವು ಮಾಡಿದ ಬೈಅತ್‌ನಿಂದ ಈಗ ಮಾತ್ರ ನೀವು ಸ್ವತಂತ್ರರಾಗಿದ್ದೀರಿ. ನೀವು ಆರು ವರ್ಷ ಕಾಲ ಖಲೀಫರ ಬೈಅತ್ ಮಾಡಿ ಜೀವಿಸಿದಿರಿ. ಆರು ವರ್ಷಗಳ ಕಾಲ ಧರ್ಮಬದ್ಧವಾದುದು ಈಗ ನಿಷಿದ್ಧವಾಗಲು ಸಾಧ್ಯವಿಲ್ಲ. ಆದುದರಿಂದ ನೀವು ಇಷ್ಟರವರೆಗೆ ಅನುಸರಿಸಿದ ಮಾರ್ಗವನ್ನು ಈಗ ಸಹ ಅನುಸರಿಸುವುದು ನ್ಯಾಯ ಬದ್ಧವಾಗಿದೆ. ನೀವು ನಮ್ಮನ್ನು ನಮ್ಮ ಧರ್ಮ ಮತ್ತು ಸಿದ್ಧಾಂತಗಳ ವಿರುದ್ಧ ವರ್ತಿಸಲು ನಿರ್ಬಂಧಿಸಬೇಡಿರಿ. ಜಮಾಅತ್ ಮತ್ತು ಇಸ್ಲಾಮಿನ ಅಭಿವೃದ್ಧಿಗೆ ಯಾವ ವ್ಯಕ್ತಿ ಪ್ರಯೋಜನಕರವಾಗಬಲ್ಲರು ಎಂಬ ಪ್ರಶ್ನೆ ಬಗ್ಗೆ ಹೇಳುವುದಾದರೆ ನೀವು ಯಾರನ್ನು ಖಲೀಫರಾಗುವ ಬಗ್ಗೆ ಒಮ್ಮತ ಹೊಂದುತ್ತೀರೋ ಅವರನ್ನು ಖಲೀಫರನ್ನಾಗಿ ಅಂಗೀಕರಿಸಲು ನಾವು ಸಹ ಸಿದ್ಧರಾಗುವೆವು.''

ಆಗ ಮೌಲವಿ ಮುಹಮ್ಮದ್ ಅಲಿ ಸಾಹೇಬರು ಹೇಳಿದರು: ನೀವು ಹೀಗೆ ಹೇಳುವುದು ಏಕೆಂದರೆ ಯಾರು ಖಲೀಫರಾಗಿ ಆಯ್ಕೆಗೊಳ್ಳುವರು ಎಂದು ನಿಮಗೆ ತಿಳಿದಿದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹೇಳಿದರು: ``ಯಾರು ಖಲೀಫರಾಗುವರೆಂದು ನನಗೆ ತಿಳಿದಿಲ್ಲ. ನೀವು ಆಯ್ಕೆ ಮಾಡುವವರನ್ನು ನಾನು ಅಂಗೀಕರಿಸುವೆನು. ಅಲ್ಲದೆ ಖಿಲಾಫತ್ ವ್ಯವಸ್ಥೆಯನ್ನು ಅಂಗೀಕರಿಸುವವರು ಸಹ ನನ್ನ ಅಭಿಪ್ರಾಯವನ್ನು ಸ್ವೀಕರಿಸುವರು. ಆಗ ಯಾವುದೇ ಭಿನ್ನಾಭಿಪ್ರಾಯ ಉಂಟಾಗಲಾರದು ಎಂದು ಹೇಳಿದೆ. ಆದರೆ ಮೌಲವಿ ಮುಹಮ್ಮದ್ ಅಲಿ ಸಾಹೇಬರು ಈ ಮಾತುಗಳನ್ನು ಒಪ್ಪಲಿಲ್ಲ. ಅವರು ಬಾಗಿಲು ತೆರೆದು ಹೊರಗೆ ಹೋದರು.''

ನಂತರ ಹಝ್ರತ್ ಮೌಲವಿ ಮುಹಮ್ಮದ್ ಅಹ್‌ಸನ್ ಅಮ್ರೋಹಿ ಸಾಹೇಬರು ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹೇಬರ ಹೆಸರನ್ನು ಖಲೀಫ ಪದವಿಗೆ ಸೂಚಿಸಿದರು. ಆಗ ಜಮಾಅತಿನ ಎಲ್ಲರೂ ಅವರೊಂದಿಗೆ ಬೈಅತ್ ಸ್ವೀಕರಿಸಲು ಒತ್ತಾಯ ಪಡಿಸಿದರು. ಹಾಗೆ ದ್ವಿತೀಯ ಶಕ್ತಿ ಜಾರಿಗೊಳ್ಳುವುದನ್ನು ಎದುರಿಸಿದ ಕಲಹಗಾರರು ಪರಾಜಿತರಾದರು. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶುಭವಾರ್ತೆ ಈಡೇರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಎರಡನೆಯ ಸಲ ಖಿಲಾಫತನ್ನು ಸ್ಥಿರಗೊಳಿಸಿದನು. ಖಿಲಾಫತ್‌ನಿಂದ ದೂರಸರಿದು ಹೋದವರಲ್ಲಿ ಧಾರ್ಮಿಕ ವಿದ್ವಾಂಸರಿದ್ದರು ಲೌಕಿಕ ವಿದ್ವಾಂಸರೂ ಇದ್ದರು. ವಿದ್ಯಾವಂತರೂ ಅನುಭವಶಾಲಿಗಳೂ ಇದ್ದರು. ಐಶ್ವರ್ಯವಂತರೂ ಇದ್ದರು. ಅವರು ಜಮಾಅತಿನ ಖಜಾನೆಯನ್ನು ಸಂಪೂರ್ಣವಾಗಿ ತಮ್ಮ ಕೈವಶ ಹೊಂದಿದ್ದರು. ಆದರೆ ಆ ಜನರೆಲ್ಲರೂ ಪರಾಜಿತರಾದರು. ದ್ವಿತೀಯ ಖಿಲಾಫತ್ ಸ್ಥಾಪನೆಯಾದ ಕೂಡಲೇ ಮೌಲವಿ ಮುಹಮ್ಮದ್ ಅಲಿ ಸಾಹೀಬ್ ಖಾದಿಯಾನ್‌ನಿಂದ ಹೊರಗೆ ಹೋದರು. ಅವರೊಂದಿಗಿದ್ದ ಈ ಗುಂಪಿನ ಜನರು ಖಿಲಾಫತ್ ವ್ಯವಸ್ಥೆಯನ್ನು ನಾಶಗೊಳಿಸಲು ಅನಂತರ ಸಹ ಬಹಳ ಪ್ರಯತ್ನ ಮಾಡುತ್ತಾ ಇದ್ದರು. ಆದರೆ ಯಾವಾಗಲೂ ಅವರಿಗೆ ತಮ್ಮ ಉದ್ದೇಶ ಲಕ್ಷ್ಯ ಈಡೇರಿಸಲು ಸಾಧ್ಯವಾಗಲಿಲ್ಲ. ಈಗ 101 ವರ್ಷಗಳು ದಾಟಿ ಹೋಗಿವೆ. ಅತ್ಯಂತ ಅನಾನುಕೂಲ ಪರಿಸ್ಥಿತಿಯಲ್ಲಿಯೂ ಖಾದಿಯಾನ್ ಅಭಿವೃದ್ಧಿ ಹೊಂದುತ್ತಲೇ ಇದೆ.

ಖಿಲಾಫತ್ ವ್ಯವಸ್ಥೆಗೆ ಅಲ್ಲಾಹನು ನೀಡುತ್ತಿರುವ ಬೆಂಬಲದ ದೃಶ್ಯಗಳನ್ನು ನಾವು ಪ್ರತಿದಿನ ನೋಡುತ್ತಾ ಇದ್ದೇವೆ. ಖಿಲಾಫತ್‌ನೊಂದಿಗೆ ಕೈ ಜೋಡಿಸಿರುವ ಜನರಿಗೆ ಅಲ್ಲಾಹನು ಜರ್ಮನಿಯಲ್ಲೂ ಅನುಗ್ರಹ ನೀಡುತ್ತಿದ್ದಾನೆ. ಕೆಲವು ದಿನಗಳ ಹಿಂದೆ ಇಲ್ಲಿನ ಅನ್‌ಸಾರುಲ್ಲಾಹ್ ಮತ್ತು ಲಜ್‌ನಇಮಾಇಲ್ಲಾಹ್ ಜೊತೆ ಸೇರಿ ಐದು ಮಹಡಿಗಳ ಒಂದು ಕಟ್ಟಡ ಖರೀದಿಸಿದರು. ಅದನ್ನು 1.7 ಮಿಲಿಯನ್ ಜರ್ಮನ್ ಕರೆನ್ಸಿ ಅಥವಾ ಎಪ್ಪತ್ತು ಲಕ್ಷ ಯುರೋ ನೀಡಿ ಖರೀದಿಸಲಾಗಿದೆ. ಅಂದು ಖಾದಿಯಾನಿನಲ್ಲಿ ಖಿಲಾಫತ್ ಖಜಾನೆಯಲ್ಲಿ ಒಂದು ರೂಪಾಯಿಗಿಂತ ಕಡಿಮೆ ಮೊತ್ತವನ್ನು ಬಿಟ್ಟು ಹೋಗಿ ನಗುತ್ತಾ ಇದ್ದ ಖಿಲಾಫತ್ ವಿರೋಧಿಗಳು ಈಗ ನೋಡಲಿ ಖಿಲಾಫತ್ ವ್ಯವಸ್ಥೆ ಹೇಗೆ ನಡೆಯುತ್ತಿದೆ ಎಂದು. ಈ ಖಿಲಾಫತ್‌ನೊಂದಿಗೆ ಜೋಡಿಸಿರುವ ಎರಡು ಅಧೀನ ಶಾಖೆಗಳು ಒಂದು ವಿಶಾಲ ಐದು ಮಳಿಗೆಯ ಕಟ್ಟಡವನ್ನು ಮೂವತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ನೀಡಿ ಖರೀದಿಸಿದೆ. ಇದು ಅಲ್ಲಾಹನು ಖಿಲಾಫತ್‌ಗೆ ನೀಡಿದ ಅನುಗ್ರಹವಲ್ಲದೆ ಬೇರೆ ಏನು? ಖಿಲಾಫತ್‌ನಿಂದ ದೂರ ಸರಿದವರ ಕೇಂದ್ರದ ವ್ಯವಸ್ಥೆ ಸಹ ಬಿಗಡಾಯಿಸುತ್ತಾ ಹೋಯಿತು.

ಕೆಲವು ಘಟನೆಗಳು ಬಹಳ ಆಶ್ಚರ್ಯಕರವಾಗಿವೆ. ಅಹ್ಮದಿಯಾ ಜಮಾಅತಿನ ಸತ್ಯತೆ ಮತ್ತು ಖಿಲಾಫತ್‌ಗೆ ಬೆಂಬಲದ ದೃಶ್ಯ ಅಲ್ಲಾಹನು ಹೇಗೆ ತೋರಿಸುತ್ತಾ ಇದ್ದಾನೆ ಎಂಬುದು. ಅದು ಸಹ ಅಲ್ಲಾಹನು ಅನ್ಯರಿಗೆ ತೋರಿಸಿಕೊಟ್ಟು ಸಾತ್ವಿಕರ ಹೃದಯಗಳನ್ನು ಹೇಗೆ ತೆರೆಯುತ್ತಾನೆ ಎಂಬುದು. ಒಂದೆರಡು ಘಟನೆಗಳನ್ನು ನಾನಿಲ್ಲಿ ವಿವರಿಸುತ್ತೇನೆ. ನೈಜರ್, ಆಫ್ರಿಕದ ಒಂದು ದೇಶವಾಗಿದೆ. ಅಲ್ಲಿಂದ ನಮ್ಮ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ``ಹೊಸದಾಗಿ ಬೈಅತ್ ಆದವರ ತರಬೇತಿಗಾಗಿ ಒಂದು ಕ್ಲಾಸನ್ನು ಏರ್ಪಡಿಸಲಾಗಿತ್ತು. ಆ ಕ್ಲಾಸಿನಲ್ಲಿ ಹತ್ತು ಇಮಾಮ್‌ಗಳೊಂದಿಗೆ ಒಂದು ಗ್ರಾಮದ ಚೀಫ್ (ಮುಖ್ಯ ಅಧಿಕಾರಿ) ಸಹ ಹಾಜರಾದರು. ಅವರೊಂದಿಗೆ ಕೇಳಲಾಯಿತು: ನೀವು ಇಮಾಮ್‌ಗಳೊಂದಿಗೆ ಸ್ವತಃ ಏಕೆ

ಆಗಮಿಸಿರುವಿರಿ? ಈ ಕ್ಲಾಸ್ ಇಮಾಮ್‌ಗಳ ತರಬೇತಿಗೆ ಆಗಿದೆ. ಆಗ ಚೀಫ್ ಹೇಳಿದರು: 'ಈ ವಿಷಯ ನನಗೆ ತಿಳಿದಿದೆ. ನಾನು ನಿನ್ನೆ ರಾತ್ರಿ ಒಬ್ಬ ಇಮಾಮ್‌ರೊಂದಿಗೆ ತರಬೇತಿ ಕ್ಲಾಸಿನಲ್ಲಿ ಸೇರಲು ಹೇಳಿದಾಗ ಅವರು ಹೇಳಿದರು: ನಗರದ ಸುನ್ನೀ ವಹಾಬಿ ಮತಪಂಡಿತರು ನನ್ನೊಂದಿಗೆ ಹೇಳಿದ್ದಾರೆ– ಅಹ್ಮದಿಯರು ಕಾಫಿರ್ ಎಂದು. ಆದುದರಿಂದ ನಾನು ಕ್ಲಾಸಿಗೆ ಹೋಗಲಾರೆ ಎಂದು ಹೇಳಿದರು. ನನಗೆ ಆಶ್ಚರ್ಯವಾಯಿತು. ದು:ಖವೂ ಆಯಿತು. ಅಹ್ಮದಿಯರು ಕಾಫಿರರಾಗುವುದು ಹೇಗೆ? ಅವರು ಕಾಫಿರರಾದರೆ ಅವರಿಗೆ ಈ ಗ್ರಾಮದಲ್ಲಿ ತಬ್ಲೀಗ್ ಮಾಡಲು ಅನುಮತಿ ನೀಡಿದವನು ನಾನು. ಆದುದರಿಂದ ನಾನು ದೊಡ್ಡ ಕಾಫಿರ್ ಆಗುವುದಿಲ್ಲವೇ? ಎಂದು ಯೋಚಿಸಿದೆ. ಹಾಗೆ ನಾನು ರಾತ್ರಿ ಬಹಳ ಪ್ರಾರ್ಥನೆ ಮಾಡಿದೆ. ಅಲ್ಲಾಹನಿಂದ ಮಾರ್ಗದರ್ಶನ ಯೋಚಿಸುತ್ತಾ ನಿದ್ರಿಸಿದೆ. ರಾತ್ರಿ ನಾನು ಒಂದು ಸ್ವಪ್ನ ಕಂಡೆನು. ನನ್ನ ಮನೆಯೊಳಗೆ ನಕ್ಷತ್ರಗಳು ಇಳಿದು ಬಂದುವು ಅನಂತರ ಚಂದ್ರ ಸಹ ಇಳಿದು ಬಂತು. ಅವುಗಳಲ್ಲಿ ಪ್ರಕಾಶವಿರಲಿಲ್ಲ. ಆಗ ಆಕಾಶದಿಂದ ಬಿಳಿವಸ್ತ್ರಧಾರಿಯಾದ ಒಬ್ಬ ಮಹಾತ್ಮರು ನನ್ನ ಮನೆಗೆ ಇಳಿದು ಬಂದು ಪ್ರವೇಶಿಸಿದರು. ಅವರು ಬಂದಾಗ ನಕ್ಷತ್ರಗಳೂ ಚಂದ್ರನೂ ಬೆಳಗಲು ತೊಡಗಿದುವು. ಮನೆಯೊಳಗೆ ಪ್ರಕಾಶ ವ್ಯಾಪಿಸಿತು. ಈ ವ್ಯಕ್ತಿ ಅಹ್ಮದಿಯರ ಒಬ್ಬ ಮುಖ್ಯಸ್ಥ ಎಂದು ನನಗೆ ತೋಚಿತು. ನಾನು ಅವರೊಂದಿಗೆ ನೀವು ಅಹ್ಮದಿಯರ ಖಲೀಫರೋ ಎಂದು ಕೇಳುವಷ್ಟರಲ್ಲಿ ನನಗೆ ಎಚ್ಚರವಾಯಿತು.''

ನಮ್ಮ ಮುಬಲ್ಲಿಗ್ ಸಾಹೇಬರು ಆ ಚೀಫ್‌ರಿಗೆ ಕೆಲವು ಪೋಟೋಗಳನ್ನು ತೋರಿಸಿ ಕನಸಿನಲ್ಲಿ ಕಂಡವರನ್ನು ಗುರುತಿಸಲು ಹೇಳಿದರು. ಆಗ ಚೀಫ್ ಕೂಡಲೆ ನನ್ನ ಫೋಟೋ (ಅಂದರೆ ಹುಝೂರರ ಪೋಟೋ)ವನ್ನು ಗುರುತಿಸಿ ಹೇಳಿದರು: ಇವರನ್ನೇ ನಾನು ಕನಸಿನಲ್ಲಿ ಆಕಾಶದಿಂದ ಇಳಿದು ಬರುವುದಾಗಿ ಕಂಡೆನು ಎಂದು ಪ್ರಮಾಣ ಮಾಡುತ್ತಾ ಹೇಳಿದರು.

ಗ್ಯಾಂಬಿಯಾದ ಅಮೀರ್ ಸಾಹೇಬರು ಬರೆಯುತ್ತಾರೆ: ''ಒಂದು ಗ್ರಾಮದಲ್ಲಿ ತಬ್ಲೀಗ್ ಮಾಡುವಾಗ ಬೈಅತ್ ಶರತ್ತುಗಳನ್ನು ವಿವರಿಸಲಾಯಿತು. ಆಗ ಗ್ರಾಮದ ಇಮಾಮ್ ಸಾಹೇಬರು ಮತ್ತು ಅಭಿವೃದ್ಧಿ ಕಮಿಟಿಯ ಚೆಯರ್‌ಮೇನ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಮಾಮ್ ಮಹ್‌ದಿ ಆಗಮಿಸುವ ಭವಿಷ್ಯವಾಣಿ ಹೇಳಿದ್ದಾರೆ. ಇಂದು ಮೊದಲನೆಯ ಬಾರಿ ನಾವು ಇಮಾಮ್ ಮಹ್‌ದಿ ಆಗಮಿಸಿದ ಕುರಿತು ಕೇಳುತ್ತಿದ್ದೇವೆ ಎಂದು. ಆ ಗ್ರಾಮದ 350 ಜನರು ಬೈಅತ್ ಮಾಡಿದರು.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಖಿಲಾಫತ್ ಎಂಬ ದ್ವಿತೀಯ ಶಕ್ತಿ ಅಲ್ಲಾಹನು ಸ್ಥಾಪಿಸಿದುದಾಗಿದೆ. ಅದಕ್ಕೆ ಅಲ್ಲಾಹನು ನೀಡುವ ಸಹಾಯಗಳನ್ನು ನಾವು ಕಾಣುತ್ತಿದ್ದೇವೆ. ಯಾರು ತಮ್ಮ ವಿಶ್ವಾಸದಲ್ಲಿ ದೃಢಚಿತ್ತರಾಗಿರುತ್ತಾರೋ ಅವರು ದೃಷ್ಟಾಂತಗಳನ್ನು ಮತ್ತು ದೈವಿಕ ಸಹಾಯಗಳನ್ನು ನೋಡುತ್ತಾ ಹೋಗುವರು. ಆದುದರಿಂದ ನೀವು ನಿಮ್ಮ ವಿಶ್ವಾಸವನ್ನು ಬಲಪಡಿಸುತ್ತಾ ಇರಿ. ಖಿಲಾಫತ್‌ನೊಂದಿಗೆ ನಿಮ್ಮ ಸಂಬಂಧ ಜೋಡಿಸಿರಿ. ನಿಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲು ಗಮನ ಹರಿಸಿರಿ. ಖಿಲಾಫತ್‌ನಿಂದ ಅನುಗ್ರಹಗಳಿಸಲು ಈ ಹೊಣೆಗಾರಿಕೆಗಳನ್ನು ಈಡೇರಿಸುವ ಬಗ್ಗೆ ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಖಿಲಾಫತ್ ಮೂಲಕ ಭಯದ ವಾತಾವರಣವನ್ನು ನಿವಾರಿಸಿ ಶಾಂತಿ ದಯಪಾಲಿಸುವ ವಾಗ್ದಾನ ಮಾಡಿದ್ದಾನೆ. ಆದರೆ ಈ ವಾಗ್ದಾನ ಮಾಡಿದುದು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವವರಿಗಾಗಿದೆ. ಪ್ರಥಮ ಹಕ್ಕು ಇದಾಗಿದೆ. **ಯಅ್‌ಬುದೂನನೀ** ಅವರು ನನ್ನನ್ನು ಮಾತ್ರ ಆರಾಧಿಸಬೇಕು ಎಂದು ಅಲ್ಲಾಹನು ಹೇಳಿದ್ದಾನೆ. ನೀವು ಅನುಗ್ರಹ ಪಡೆಯಬೇಕಾದರೆ ಮೊದಲನೆಯದಾಗಿ ಅಲ್ಲಾಹನ ಆರಾಧನೆ ಮಾಡಬೇಕು. ಯಾರನ್ನೂ ಅಲ್ಲಾಹನಿಗೆ ಸಹಭಾಗಿಗಳಾಗಿ ಮಾಡಬಾರದು. ಐದು ಹೊತ್ತಿನ ನಮಾಝುನ್ನು ನಿಷ್ಠೆಯಿಂದ ಮಾಡಬೇಕು. ಅದನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಪ್ರಯತ್ನಿಸಬೇಕು. ಎರಡನೆಯದು **ಲಾ ಯುಶ್‌ರಿಕೂನ ಬೀ ಶೈಅನ್** ಅಂದರೆ ಅವರು ಯಾವುದನ್ನೂ ನನಗೆ ಸಹಭಾಗಿಯನ್ನಾಗಿ ಮಾಡಲಾರರು ಎಂಬುದಾಗಿದೆ.

ಖಿಲಾಫತ್‌ನೊಂದಿಗೆ ಪ್ರೀತಿ ಮತ್ತು ಅನುಸರಣೆ ಅಲ್ಲಾಹನ ಅನುಗ್ರಹಗಳನ್ನು ಆಕರ್ಶಿಸುತ್ತದೆ. ಮತ್ತು ಉತ್ತಮ ಪರಿಣಾಮಗಳನ್ನು ನೀಡುತ್ತದೆ. ಇದು ಅಲ್ಲಾಹನು ಸ್ಥಾಪಿಸಿದ ವ್ಯವಸ್ಥೆಯಾಗಿದೆ. ಧರ್ಮದ ಅಭಿವೃದ್ಧಿಗೆ ಮಾಡುವ ಪ್ರತಿಯೊಂದು ಪ್ರಯತ್ನವನ್ನು ಅಲ್ಲಾಹನು ಖಿಲಾಫತ್‌ನೊಂದಿಗೆ ಜೋಡಿಸಿದ್ದಾನೆ. ಯಾವುದಾದರೂ ಹುದ್ದೇದಾರನ ಹೃದಯದಲ್ಲಿ ಯಾವಾಗಲಾದರೂ ಅಹಂಭಾವ ಉಂಟಾದರೆ ಮತ್ತು ತನ್ನಿಷ್ಟ ಪ್ರಕಾರ ನಡೆಯುವ ಭಾವನೆ ಉಂಟಾದರೆ ಅಂತಹವರು ಇಸ್ತಿಗ್‌ಫಾರ್ ದುಆ ಮಾಡಬೇಕಾಗಿದೆ. ಜಮಾಅತಿನ ಅಭಿವೃದ್ಧಿಯಲ್ಲಿ ನಮ್ಮ ವಿದ್ವಾಂಸರ ವಿದ್ಯಾಸಂಪನ್ನತೆಯಾಗಲಿ, ಬುದ್ಧಿಶಾಲಿಗಳ ಬುದ್ಧಿವಂತಿಕೆಯಾಗಲಿ, ಲೌಕಿಕ ಜ್ಞಾನ ಸಂಪನ್ನರ ಜ್ಞಾನಸಮೃದ್ಧಿಯಾಗಲೀ ಕಾರ್ಯ ಪ್ರವೃತ್ತವಾಗುವುದಿಲ್ಲ. ಯಾವುದಾದರೂ ವಿದ್ವಾಂಸರ, ಬುದ್ಧಿವಂತರ, ಲೌಕಿಕ ಜ್ಞಾನವುಳ್ಳವರ, ವೈಜ್ಞಾನಿಕ ನಿಷ್ಣಾತರ ಕೆಲಸ ಜಮಾಅತಿನ ಅಸಾಧಾರಣವಾದ ಒಳಿತನ್ನು ಉಂಟುಮಾಡುತ್ತಾ ಇದ್ದರೆ ಅದು ಅಲ್ಲಾಹನ ಅನುಗ್ರಹದಿಂದ ಮಾತ್ರವಾಗಿದೆ. ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿರುವ ಕಾರಣದಿಂದ ಮಾತ್ರವಾಗಿದೆ. ಏಕೆಂದರೆ ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿದವರಿಗೆ ಮಾತ್ರವೇ ಈ ವಾಗ್ದಾನಗಳನ್ನೆಲ್ಲಾ ನೀಡಲಾಗಿದೆ. ಲೌಕಿಕ ವ್ಯವಹಾರಗಳಲ್ಲಿ ನಿಸ್ಸಂಶಯವಾಗಿ ಜ್ಞಾನ, ಬುದ್ಧಿವಂತಿಕೆ ನೈಪುಣ್ಯತೆ ಪ್ರಯೋಜನಕರ ವಾಗಬಹುದು. ಆದರೆ ಜಮಾಅತಿನಲ್ಲಿರುವವರು ಜಮಾಅತಿನ ಕೆಲಸಗಳಲ್ಲಿ ಉತ್ತಮ ಪರಿಣಾಮ ಪಡೆಯಲು ಖಿಲಾಫತನ್ನು ಅನುಸರಿಸಿ ಕಾರ್ಯ ಪ್ರವೃತ್ತವಾಗಬೇಕಾದುದು ಅನಿವಾರ್ಯವಾಗಿದೆ. ಇದೇ ರೀತಿ ನಮ್ಮ ವಿದ್ವಾಂಸರ ಹೊಣೆಗಾರಿಕೆ ಏನೆಂದರೆ ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮರಲ್ಲಿ ಹೊಸದಾಗಿ ನಂಬಿದ ಯುವಕರು ಮತ್ತು ಮಕ್ಕಳಲ್ಲಿ ಖಿಲಾಫತ್‌ನೊಂದಿಗೆ ವಾಸ್ತವಿಕ ಸಂಬಂಧ ಸ್ಥಾಪಿಸುವ ಬಗ್ಗೆ ಅರಿವು ಇಲ್ಲದಿದ್ದರೆ ಅವರಿಗೆ ಅರಿವು ನೀಡಬೇಕು. ಇದೇ ರೀತಿ ಹುದ್ದೇದಾರರು ಸಹ ಜವಾಬ್ದಾರಿ ಹೊಂದಿದ್ದಾರೆ. ಅವರಿಗೆ ಧಾರ್ಮಿಕ ಸೇವೆ ಸಲ್ಲಿಸುವ ಸಂದರ್ಭ ಅಲ್ಲಾಹನು ಒದಗಿಸಿದ್ದರೆ, ಅವರು ತಮ್ಮ ಧಾರ್ಮಿಕ ಜ್ಞಾನವನ್ನು ವರ್ಧಿಸಲು ಪ್ರಯತ್ನಿಸಬೇಕಾಗಿದೆ. ತಮ್ಮ ನಿಷ್ಠೆಯನ್ನು ವರ್ಧಿಸಬೇಕು. ತಮ್ಮ ತಖ್ವ (ಭಯಭಕ್ತಿ) ಸಹ ವರ್ಧಿಸಬೇಕು. ಖಿಲಾಫತ್‌ನೊಂದಿಗೆ ತಮ್ಮ ಸಂಬಂಧ ಸಹ ವರ್ಧಿಸಬೇಕು. ಖಲೀಫರ ಮಾತುಗಳನ್ನು ಆಲಿಸಬೇಕು ಮತ್ತು ಅದರ ಪ್ರಕಾರ ಕೆಲಸ ಮಾಡಲು ಪ್ರಯತ್ನಿಸಬೇಕು. ಖಿಲಾಫತ್‌ನೊಂದಿಗೆ ಸಂಬಂಧವನ್ನು ವರ್ಧಿಸಬೇಕು. ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವವರು ತಮ್ಮ ಸ್ಥಿತಿಯಲ್ಲಿ ಅಸಾಧಾರಣ ಬದಲಾವಣೆಯಾಗುವುದನ್ನು ಕಾಣುತ್ತಾರೆ.

ಹುದ್ದೇದಾರರು ಖಿಲಾಫತ್ತ್‌ನ ಮಹತ್ವ ಮತ್ತು ಅದರೊಂದಿಗೆ ಸಂಬಂಧ ಬಲಪಡಿಸುವ ಆವಶ್ಯಕತೆ ಅರಿತುಕೊಂಡು ಪ್ರಯತ್ನಿಸಿದರೆ ಅಂತಹ ಹುದ್ದೇದಾರರ ಮಹತ್ವ ತಾನಾಗಿಯೇ ವರ್ಧಿಸುವುದು. ಮುಬಲ್ಲಿಗರು, ಹುದ್ದೇದಾರರು, ವಿದ್ವಾಂಸರು ಎಲ್ಲರೂ ಆಯಾಕಾಲದ ಖಲೀಫರ ಕೈ ಮತ್ತು ತೋಳುಗಳು ಆಗಬೇಕು. ತಮ್ಮ ಕೆಲಸಗಳನ್ನು ಆಯಾಕಾಲದ ಖಲೀಫರಿಗೆ ಅಧೀನರಾಗಿ ಇರಿಸಿಕೊಳ್ಳಿರಿ. ಮತ್ತು ಇತರರಿಗೂ ಉಪದೇಶ ನೀಡಿರಿ. ಖಲೀಫರು ಜಮಾಅತಿನ ಸುಧಾರಣೆಗೆ ಏನನ್ನಾದರೂ ಹೇಳಿದರೆ ಅದನ್ನು ಜಮಾಅತ್ತಿನ ಸದಸ್ಯರ ಮುಂದೆ ಪುನರಾವರ್ತಿಸಿ ಹೇಳಿರಿ. ಪುನಃ ಪುನಃ ಹೇಳಿರಿ. ಮತ್ತೆ ಮತ್ತೆ ಹೇಳಿರಿ. ಅದರ ಮೂಲಕ ಕಡಿಮೆ ಬುದ್ಧಿಯುಳ್ಳವರು ಸಹ ಅದನ್ನು ಅರ್ಥ ಮಾಡಿಕೊಳ್ಳುವಂತೆ ಆಗಲಿ. ಅವರು ಧರ್ಮದ ಮಾರ್ಗದಲ್ಲಿ ಸರಿಯಾಗಿ ಚಲಿಸುವ ಹಾಗೆ ಆಗಲಿ.

ಖಲೀಫರ ಮಾತುಗಳನ್ನು ಕೇವಲ ಆಲಿಸುವುದಲ್ಲ, ಅವುಗಳ ಪ್ರಕಾರ ಕೆಲಸ ಮಾಡುವವರು ಆಗುವ ಭಾಗ್ಯ ಅಲ್ಲಾಹನು ಜಮಾಅತಿನ ಸದಸ್ಯರಿಗೆ ಮತ್ತು ಜಮಾಅತಿನ ವಿದ್ವಾಂಸರಿಗೆ, ಹುದ್ದೇದಾರರಿಗೆ ದಯಪಾಲಿಸಲಿ. ಅಲ್ಲಾಹನ ಇಷ್ಟಪ್ರಕಾರ ನಾವು ಖಿಲಾಫತ್ ಎಂಬ ಅಲ್ಲಾಹನ ಪಾರಿತೋಷಿಕವನ್ನು ಸಂರಕ್ಷಿಸುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ – ಆಮೀನ್.

––––––––––––––*****––––––––––––––

***Friday Sermon delivered by Hadrath Khaleefatul Masih Al Khamis**[(atba)]*

*at Frankfurt, Germany on 29-05-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon